ಓ.ಎಸ್.ನಂ.**504/2016**
ಡಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **03.03.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ವಾಟೀ ಸವಾಲುಃ ವಾದಿ ಪರ ಶ್ರೀ ವೈ.ಎಸ್.ಆರ್. ವಕೀಲರಿಂದ**

ವಾದಿಯು ಅವರಿಗೆ ದಾವಾ ಆಸ್ತಿಯಲ್ಲಿ ಭಾಗಬರಬೇಕೆಂದು ಈ ಕೇಸನ್ನು ಹಾಕಿದ್ದಾರೆ. ನಾನು ಈ ಕೇಸಿನಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದೇನೆ. ಲಿಖಿತ ಹೇಳಿಕೆಗೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ಏನು ಬರೆಸಿದ್ದೇನೆಂದು ಈಗ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ.

ಕೆಂಪಯ್ಯನವರು ನಮ್ಮ ಕುಟುಂಬದ ಮೂಲ ಪುರುಷ ಎಂದರೆ ಸರಿ. ಕೆಂಪಯ್ಯನವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ನರಸಿಂಹಮೂರ್ತಿ, ಮುನಿಯಪ್ಪ, ನರಸಿಂಹಯ್ಯ ಮತ್ತು ನಾಗರಾಜು. ಸದರಿ ನರಸಿಂಹಮೂರ್ತಿ ನನ್ನ ತಂದೆ, ತಾಯಿಯ ಹೆಸರು ರುದ್ರಮ್ಮ. ನನ್ನ ತಂದೆ ಮೃತಪಟ್ಟು **9–10** ವರ್ಷಗಳಾಗಿವೆ. ನನ್ನ ತಾಯಿ ಕೂಡ ಮೃತಪಟ್ಟಿದ್ದಾರೆ. ನಾನು ಮತ್ತು **3**ನೇ ಪ್ರತಿವಾದಿಯು ನರಸಿಂಹಮೂರ್ತಿ ವಾರಸ್ಸುದಾರರು ಎಂದರೆ ಸರಿ. ನರಸಿಂಹಯ್ಯ ಮತ್ತು ಅವರ ಹೆಂಡತಿ ನಾರಾಯಣಮ್ಮ ಮೃತಪಟ್ಟಿದ್ದಾರೆ ಎಂದರೆ ಸರಿ. ಅವರಿಬ್ಬರಿಗೆ ಮಕ್ಕಳಿಲ್ಲ ಎಂದರೆ ಸರಿ. ಕೆಂಪಯ್ಯನವರ ಕೊನೆಯ ಮಗ – ನಾಗರಾಜು ಈ ಕೇಸಿನ **1**ನೇ ಪ್ರತಿವಾದಿ ಎಂದರೆ ಸರಿ.

ವಾದಿಯು ಸರ್ವೆ ನಂ.**22** ರ ಆಸ್ತಿಗೆ ಈ ದಾವೆ ಹಾಕಿದ್ದಾರೆ, ಅದರಲ್ಲಿ **2** ಎಕರೆ **6** ಗುಂಟೆ ಕಡಿಮೆ ವಿಸ್ತೀರ್ಣ ಇದೆ. ಸದರಿ ಆಸ್ತಿಯು ಮೂಲತಃ ಶಾನುಭೋಗರಾದ ವೆಂಕಟರಾಯಪ್ಪರವರಿಗೆ ಸೇರಿತ್ತು ಎಂದರೆ ಗೊತ್ತಿಲ್ಲ. ಕೆಂಪಯ್ಯ ಮತ್ತು ಅವರ ನಾಲ್ಕು ಜನ ಮಕ್ಕಳು ದಾವಾ ಐಟಂ ನಂ.**1** ರಲ್ಲಿ ಗೇಣಿದಾರರಾಗಿ ವ್ಯವಸಾಯ ಮಾಡುತ್ತಿದ್ದರು

ಎಂದರೆ ಗೊತ್ತಿಲ್ಲ. ಈ ದಾವೆ ಹಾಕುವ **50** ವರ್ಷಗಳ ಹಿಂದೆ ಕೆಂಪಯ್ಯ ಮತ್ತು ಅವರ ಮಕ್ಕಳು ಸದರಿ ಆಸ್ತಿಯಲ್ಲಿ ಗೇಣಿದಾರರಾಗಿದ್ದರು ಎಂದರೆ ಗೊತ್ತಿಲ್ಲ. ಈ ವಿಚಾರವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಐಟಂ ನಂ.**1** ರ ಆಸ್ತಿಯು ಫಾರಂ ನಂ.**7** ರಲ್ಲಿ ಅರ್ಜಿ ಸಲ್ಲಿಸಿದಾಗ ದಿನಾಂಕ:**23.09.2004** ರಲ್ಲಿ ನನ್ನ ತಂದೆ ನರಸಿಂಹಮೂರ್ತಿ ಹಾಗೂ **1**ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿಯಾಗಿ ಮಂಜೂರಾಗಿದೆ ಎಂದರೆ ಗೊತ್ತಿಲ್ಲ. ಸದರಿ ಮಂಜೂರಾತಿ ಆದೇಶದ ಪ್ರಕಾರ ನನ್ನ ತಂದೆ ಮತ್ತು **1**ನೇ ಪ್ರತಿವಾದಿಯು ಸದರಿ ಆಸ್ತಿಯ ಖಾತೆಯನ್ನು ಒಟ್ಟು ಕುಟುಂಬದ ಹಿತಾಸಕ್ತಿಗಾಗಿ ಎಂ.ಆರ್.ನಂ.**1/2005–06** ರಂತೆ ಅವರಿಬ್ಬರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ದಾವಾ ಐಟಂ ನಂ.**2** ರ ಆಸ್ತಿಯು ಕೆಂಪಯ್ಯನವರ ಮೂರನೇ ಮಗನಾದ ನರಸಿಂಹಯ್ಯನವರಿಗೆ ಬಗರ್ ಹುಕ್ಕುಂ ಆದೇಶದಡಿ ದಿನಾಂಕ:**19.03.1996** ರಂದು ಸರ್ಕಾರದಿಂದ ಮಂಜೂರಾಗಿದೆ ಎಂದರೆ ಇರಬಹುದು. ನರಸಿಂಹಯ್ಯನವರಿಗೆ ನೀಡಿದ ಸಾಗುವಳಿ ಚೀಟಿಯ ಆಧಾರದ ಮೇಲೆ ಎಂ.ಆರ್.ನಂ.**3/1996–97** ರಡಿಯಲ್ಲಿ ಅವರ ಹೆಸರಿಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ. ಅದೇ ರೀತಿ ವಾದಿಗೆ ದರ್ಖಾಸ್ತ್ ಮೂಲಕ ಅದೇ ಸರ್ವೆ ನಂಬರ್ **14/ಪಿ3** ರಲ್ಲಿ **15** ಗುಂಟೆ ಹಾಗೂ **1**ನೇ ಪ್ರತಿವಾದಿಗೆ **1** ಎಕರೆ **15** ಗುಂಟೆ ಜಮೀನು ಮಂಜೂರಾಗಿದೆ ಎಂದರೆ ಸರಿ. ಸದರಿ ಮಂಜೂರಾದ ಆಸ್ತಿಗಳನ್ನು ಅಂದಿನಿಂದ ಅವರವರೇ ಪ್ರತ್ಯೇಕವಾಗಿ ಅನುಭವಿಸುತ್ತಿದ್ದಾರೆ ಎಂದರೆ ಸರಿ. ನರಸಿಂಹಯ್ಯನವರು ದಿನಾಂಕ:**18.09.2007** ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. ಅವರ ಹೆಂಡತಿ ನಾರಾಯಣಮ್ಮನವರು ದಿನಾಂಕ:**16.06.2013** ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ.

ಕೆಂಪಯ್ಯನವರು ಮೃತಪಟ್ಟ ನಂತರ ಅವರ ನಾಲ್ಕು ಜನ ಮಕ್ಕಳು ಅವರ ಪಿತ್ರಾರ್ಜಿತ ಹಾಗು ಒಟ್ಟು ಕುಟುಂಬದ ಆಸ್ತಿಗಳನ್ನು ದಿನಾಂಕ:**10.01.1990** ರಂದು ಜುಬಾನಿ ಪಾರಿಕತ್ ಮೂಲಕ ಪಂಚಾಯತಿ ಪಾರಿಕತ್‌ನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ಪಾರಿಕತ್ ನಲ್ಲಿ ವಾದಿಗೆ ಸರ್ವೆ ನಂ.**27/ಪಿ1** ರಲ್ಲಿ **0.18.08**

ಗುಂಟೆಯನ್ನು ಹಿಸ್ಸೆಯಾಗಿ ಕೊಡಲಾಗಿತ್ತು ಎಂದರೆ ನೆನಪಿಲ್ಲ. ಸಾಕ್ಷಿಯು ನಿ.ಪಿ.27 – ಪಾರಿಕತ್‌ನ್ನು ನೋಡಿ ಅದರಲ್ಲಿ ನನ್ನ ತಂದೆ ಸಹಿ ಮಾಡಿದ್ದಾರೆಂದು ನೋಡಿ ಒಪ್ಪಿಕೊಳ್ಳುತ್ತಾರೆ. ಸದರಿ ಪಾರಿಕತ್ ನಲ್ಲಿ ಸರ್ವೆ ನಂ.16/1 ರಲ್ಲಿ ವಾದಿಗೆ 12 1/2 ಗುಂಟೆ ಬಿಟ್ಟಿದ್ದಾರೆ ಎಂದರೆ ಸರಿ. ಆದರೆ ಪಹಣಿಯಾಗಿಲ್ಲ. ಸರ್ವೆ ನಂ.22/5 ರಲ್ಲಿ ಒಟ್ಟು 1 ಎಕರೆ 4 ಗುಂಟೆ ಪೈಕಿ 11 1/2 ಗುಂಟೆ ಜಮೀನು 1ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿದೆ ಎಂದರೆ ಸರಿ. ಸದರಿ ಪಂಚಾಯತಿ ಪಾರಿಕತ್ ಆಗಿದ್ದರೂ ಕೂಡ ಸದರಿ ಆಸ್ತಿಯ ಖಾತೆಯು ಕೆಂಪಯ್ಯನವರ ಹೆಸರಿನಲ್ಲೇ ಬರುತ್ತಿತ್ತು ಪಾರಿಕತ್‌ನ ಆಧಾರದ ಮೇಲೆ ಖಾತೆ ಬದಲಾವಣೆಯಾಗಿಲ್ಲ ಎಂದರೆ ಸರಿ. 1990 ರಲ್ಲಿ ಐಟಂ ನಂ.1 ರ ಖಾತೆಯು ಶಾನುಭೋಗರ ಹೆಸರಿನಲ್ಲಿ ಇದ್ದ ಕಾರಣ ಸದರಿ ಆಸ್ತಿಯನ್ನು ಪಾರಿಕತ್‌ನಲ್ಲಿ ತೋರಿಸಿಲ್ಲ ಎಂದರೆ ಇರಬಹುದು.

ನನ್ನ ಮದುವೆಯು 1994 ರಲ್ಲಿ ಆಗಿದೆ. ನನ್ನ ತಂಗಿಯ ಮದುವೆಯು 1997 ರಲ್ಲಿ ಆಗಿದೆ ಎಂದರೆ ನೆನಪಿಲ್ಲ. ನನ್ನನ್ನು ಸುನಘಟ್ಟಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ನನ್ನ ತಂಗಿಯನ್ನು ಬ್ಯಾಲ್ಯಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ನಾವು ಮದುವೆಯಾದ ನಂತರ ನಮ್ಮ ಗಂಡಂದಿರ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ನಮ್ಮ ಮದುವೆಯಾದ ನಂತರ ಐಟಂ ನಂ.1 ರ ಆಸ್ತಿಯು ಎಲ್.ಆರ್.ಎಫ್. ಮೂಲಕ ಕೆಂಪಯ್ಯನವರ ನಾಲ್ಕು ಜನ ಮಕ್ಕಳಿಗೆ 2004 ರಲ್ಲಿ ಮಂಜೂರಾಗಿರುವ ಕಾರಣ ನಾನು ಮತ್ತು ನನ್ನ ತಂಗಿಯು ನರಸಿಂಹಮೂರ್ತಿಯವರ ಹೆಣ್ಣು ಮಕ್ಕಳಾಗಿರುವ ಕಾರಣ ಸದರಿ ಮಂಜೂರಾದ ಜಮೀನಿನ ಮೇಲೆ ನಮಗೆ ಯಾವುದೇ ಹಿಸ್ಸೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನರಸಿಂಹಯ್ಯ ಮತ್ತು ಅವರ ಹೆಂಡತಿ ನಾರಾಯಣಮ್ಮನವರು ಮೃತಪಟ್ಟ ನಂತರ ವಾದಿ ಹಾಗೂ ಪ್ರತಿವಾದಿಗಳು ಜಂಟಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರಲ್ಲಿ ನಾನು ಮತ್ತು ನನ್ನ ತಂಗಿಯು ವ್ಯವಸಾಯ ಮಾಡುತ್ತಿದ್ದೇವೆ. ನರಸಿಂಹಯ್ಯನವರು ಮೃತಪಟ್ಟ ನಂತರ ನಾನು ಮತ್ತು ನನ್ನ ತಂಗಿ ಸದರಿ ಆಸ್ತಿಯಲ್ಲಿ ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದೇವೆ ಎಂದು ತೋರಿಸಲು

ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಐಟಂ ನಂ.2 ರಲ್ಲಿ ವಾದಿ ಮತ್ತು ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿ ಇದ್ದರೂ ಕೂಡ ಕೇವಲ ನಾನು ಮತ್ತು ನನ್ನ ತಂಗಿ ಸ್ವಾಧೀನದಲ್ಲಿ ಇದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.